FDP 6/2019

RW-1

ದಿನಾಂಕಃ **13.12.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ವಿ ಎಂ / ಎಂ ಬಿ ವಕೀಲರಿಂದಃ**

ಲೋಕೆಶ್ ನನ್ನ ದೊಡ್ಡ ಮಗನಾಗಬೇಕು. ಕೆ ಟಿ ಪರ್ವತಯ್ಯ ನನ್ನ ಗಂಡ. ತಿಪ್ಪಮ್ಮನವರು ಕೆ ಟಿ ಪರ್ವತಯ್ಯನವರ ಮೊದಲನೆ ಹೆಂಡತಿ. ನಾನು ಕೆ ಟಿ ಪರ್ವತಯ್ಯನವರ 2 ನೇ ಹೆಂಡತಿ. ಸಾಕ್ಷಿ ಸ್ವತಃ ಹೇಳುತ್ತಾರೆ ತಿಪ್ಪಮ್ಮನವರಿಗೆ ಮಕ್ಕಳಿರುವುದಿಲ್ಲ ಎಂದು. ನನಗೆ ಲೋಕೆಶ್ ಹಿರಿಯ ಮಗ, ಸುವರ್ಣಮ್ಮ, ಗಿರೀಶ್ ಮತ್ತು ಕಲ್ಯಾಣಕುಮಾರ್ ನನ್ನ ಮಕ್ಕಳು ಎಂದರೆ ಸರಿ. ಗಿರೀಶ್ ರವರು ತೀರಿಕೊಂಡು ಸುಮಾರು 18 ವರ್ಷಗಳಾಯಿತು. ಸದರಿ ಗಿರೀಶ್ ರವರು ತೀರಿಕೊಳ್ಳುವ ಕಾಲಕ್ಕೆ ಮದುವೆ ಆಗಿರಲಿಲ್ಲ. ಗಿರೀಶ್‌ರವರು ತೀರಿಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ಮಗ ಕೆ ಟಿ ಲೋಕೆಶ್ ಒ ಎಸ್ 10/2018 ರಂತೆ ವಿಭಾಗ ಕೋರಿ ದಾವೆ ಹಾಕಿದ್ದರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಉತ್ತರಿಸುತ್ತಾರೆ. ಆ ಕೇಸಿನಲ್ಲಿ ನೀವು 15 ನೇ ಪ್ರತಿವಾದಿಯಾಗಿದ್ದಿರಿ ಎಂದರೆ ಸಾಕ್ಷಿ ಮಾಡಿರಬಹದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಕೇಸಿನಲ್ಲಿ ನಿಮಗೆ ಸಮನ್ಸ ಜಾರಿಯಾಗಿದ್ದರೂ ನೀವು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಕ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ವಕೀಲರನ್ನು ಇಟ್ಟಿದ್ದೆವು ಎಂದು ಉತ್ತರಿಸುತ್ತಾರೆ. ಆ ಕೇಸಿನಲ್ಲಿ ನೀವು ನ್ಯಾಯಾಲಯಕ್ಕೆ ಹಾಜರಾಗಿಲ್ಲ, ನಿಮ್ಮ ಯಜಮಾನರು ಮಾತ್ರ ವಕೀಲರನ್ನು ನೇಮಕ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನನ್ನ ಮಗ ಕಲ್ಯಾಣಕುಮಾರ್ ನನ್ನ ಪರವಾಗಿ ಬರುತ್ತಿದ್ದ ಎಂದು ಉತ್ತರಿಸುತ್ತಾರೆ. ನಿಮ್ಮ ಮಗ ಕಲ್ಯಾಣಕುಮಾರ್ ನ್ಯಾಯಾಲಯಕ್ಕೆ ಹಾಜರಾಗಿಲ್ಲ ವಕೀಲರನ್ನು ನೇಮಕ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಒಟ್ಟಾಗಿ ಬರುತ್ತಿದ್ದ ಎಂದು ಉತ್ತರಿಸುತ್ತಾರೆ.

ಒ ಎಸ್ 10/2018 ದಾವೆಯಲ್ಲಿ ನಿಮ್ಮನ್ನು ಪಕ್ಷಗಾರರಾಗಿ ಮಾಡಿದ್ದರು ಸಹ ನಿಮ್ಮ ಪ್ರಮಾಣಪತ್ರದಲ್ಲಿ ಆ ದಾವೆಯಲ್ಲಿ ನನ್ನನ್ನು ಪಕ್ಷಗಾರರಾಗಿ ಮಾಡಿಲ್ಲ ಎಂದು ಸುಳ್ಳು ಹೇಳಿದ್ದಿರಿ

FDP 6/2019

RW-1

ಎಂದರೆ ಸಾಕ್ಷಿ ಮಾಡಿದ್ದರು ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ನನ್ನನ್ನು ಪಕ್ಷಗಾರರಾಗಿ ಸೇರಿಸುವಂತೆ ಅರ್ಜಿ ಹಾಕಿದ್ದೆ ಎಂದು ಸುಳ್ಳು ಹೇಳಿದ್ದಿರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆ ದಿಃ 03.07.2019 ರಂದು ಡಿಕ್ರಿಯಾಗಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ನಿಮ್ಮ ಗಂಡ ನಮಗೆ ಗಿರೀಶ್ ಎಂಬ ಮಗ ಇದ್ದು ಆತ ತೀರಿಕೊಂಡಿದ್ದಾನೆ ಎಂದು ಹೇಳಿ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ಎಲ್ಲರಿಗೂ ತಲಾ 1/6 ಎಂದು ಭಾಗಾಂಶ ಆದೇಶವಾಗಿದೆ ಹಾಗಾಗಿ ಗಿರೀಶ್‌ರವರಿಗೆ ಭಾಗಾಂಶ ಆದೇಶಿಸುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ಎಲ್ಲರಿಗೂ ಇದೆ ಎಂದು ಉತ್ತರಿಸುತ್ತಾರೆ. ನೀವು ದಿಃ 03.07.2019 ರ ಡಿಕ್ರಿ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಆರ್ ನ್ನು  ನೀವು ಎಲ್ಲಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಗೊತ್ತಿಲ್ಲ, ನನ್ನ ಮಗ ಪಡೆದಿರುವುದು ಎಂದು ಉತ್ತರಿಸುತ್ತಾರೆ. ಈ ಕೇಸಿಗೊಸ್ಕರ ನೀವು ಸೃಷ್ಟಿ ಮಾಡಿದ್ದಿರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಲೋಕೇಶ್ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.